# ಕಡ್ಡಾಯ ಕನ್ನಡ ಪ್ರಶ್ನೆಪತ್ರಿಕೆ

ಅವಧಿ: 2 ಗಂಟೆ

ಗರಿಷ್ಟ ಅಂಕಗಳು: 150

*ವಿಭಾಗ– ಎ*

**1. ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದರ ಮೇಲೆ ಸುಮಾರು 350 ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ. (25 ಅಂಕಗಳು)**

(ಅ) ಕರ್ನಾಟಕದ ಏಕತೆಯನ್ನು ಕಾಪಾಡುವಲ್ಲಿ ಕನ್ನಡದ ಪಾತ್ರ

(ಆ) ಯುವಜನರ ಮೇಲೆ ಮಾಧ್ಯಮಗಳ ಪ್ರಭಾವ

(ಇ) ಲೋಕ್ಸಂಸ್ಕೃತಿಯನ್ನು ಉಳಿಸುವ ಮಹತ್ವ

(ಈ) ಆಧುನಿಕ ಯುಗದಲ್ಲಿ ಕನ್ನಡ ಸಾಹಿತ್ಯ

**2. ಈ ಕೆಳಗಿನ ಗದ್ಯಭಾಗವನ್ನು ಓದಿ, ಸಂಬಂಧಪಟ್ಟ ಪ್ರಶ್ನೆಗಳಿಗೆ ನಿಮ್ಮ ಪದಗಳಲ್ಲಿ ಉತ್ತರಿಸಿ. (25 ಅಂಕಗಳು)**

ಭಾರತೀಯ ಷೇರು ಮಾರುಕಟ್ಟೆ ಜೊತೆ ಜೊತೆಗೆ ವಿಶ್ವದ ಬಹುತೇಕ ಎಲ್ಲಾ ಷೇರು ಮಾರುಕಟ್ಟೆಗಳೂ ಮತ್ತೊಂದು ಕುಸಿತವನ್ನು ಕಂಡಿವೆ. ಅಮೇರಿಕಾ ಮಾರುಕಟ್ಟೆಯಂತೂ ಇನ್ನಿಲ್ಲದ ಕುಸಿತವನ್ನು ದಾಖಲಿಸಿತು. ಈ ರೀತಿ ಮಾರುಕಟ್ಟೆ ಕುಸಿತಕ್ಕೆ ಕಾರಣವೇನು ಎನ್ನುವುದನ್ನು ಇಂದಿಗೆ ಎಲ್ಲರಿಗೂ ಗೊತ್ತು. ಅಮೇರಿಕಾ ತೆರಿಗೆ ಹೆಚ್ಚಳ ಮಾಡುತ್ತಿದೆ ಆ ಕಾರಣದಿಂದ ಮಾರುಕಟ್ಟೆ ಕುಸಿತಕ್ಕೆ ತುತ್ತಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಾಮಾನ್ಯ ಕಾರಣ. ಇದು ಸರಿಯಾಗಿದೆ.

ಆದರೆ ಅಮೇರಿಕಾ ತೆರಿಗೆ ಹೆಚ್ಚಳ ಏಕೆ ಮಾಡುತ್ತಿದೆ? ಹೀಗೆ ತೆರಿಗೆ ಹೆಚ್ಚಳ ಮಾಡುವುದು ಜಗತ್ತಿನ ಇತರ ದೇಶಗಳಿಗೆ ಮಾತ್ರವಲ್ಲ , ಅಮೇರಿಕಾ ದೇಶಕ್ಕೂ ಹೊಡೆತವನ್ನು ನೀಡುತ್ತದೆ. ಈ ವಿಚಾರ ಕೂಡ ಇನ್ನೊಂದು ವರ್ಗದ ಜನರ ಅರಿವಿಗೆ ಬಂದಿರುತ್ತದೆ. ಅಮೇರಿಕಾ ದೇಶಕ್ಕೂ ಇದು ಕೆಟ್ಟ ಪರಿಣಾಮ ಬೀರುತ್ತದೆ ಎನ್ನುವುದು ಒಬ್ಬ ಸಾಮಾನ್ಯ ಎಕಾನಾಮಿಕ್ಸ್ ವಿದ್ಯಾರ್ಥಿಗೂ ಗೊತ್ತಾಗುತ್ತದೆ ಎಂದ ಮೇಲೆ , ಹತ್ತಾರು ತಜ್ಞರ ತಂಡವನ್ನು ಇಟ್ಟುಕೊಂಡು ನಿರ್ಧಾರಗಳನ್ನು ತೆಗೆದುಕೊಳ್ಳುವ ಟ್ರಂಪ್ ಆಡಳಿತಕ್ಕೆ ಗೊತ್ತಾಗುವುದಿಲ್ಲವೇ? ಎನ್ನುವ ಪ್ರಶ್ನೆ ಉದ್ಭವಾಗುತ್ತದೆ.

<u>ವಿಶ್ವದ ದೊಡ್ಡಣ್ಣ ಅಮೇರಿಕಾಗೆ ಯಾಕೆ ಅಷ್ಟು ಸಾಲ</u>

ಬಹಳಷ್ಟು ಜನ ಅಮೇರಿಕಾ ಅಷ್ಟೊಂದು ಸಾಲವನ್ನು ಏಕೆ ಮಾಡಿಕೊಂಡಿತು? ಅದೊಂದು ಸಾಹುಕಾರ, ಮುಂದುವರೆದ ದೇಶವಲ್ಲವೇ? ಎನ್ನುವ ಪ್ರಶ್ನೆಯನ್ನು ಸೋಶಿಯಲ್ ಮೀಡಿಯಾದಲ್ಲಿ ಕೇಳಿದ್ದೀರಿ. ಹಾಗೆ ಅಮೇರಿಕಾ ದೇಶಕ್ಕೆ ಸಾಲ ಕೊಡುವಂತಹ ಸಾಹುಕಾರ ಯಾರು? ಎನ್ನುವ ಪ್ರಶ್ನೆಯನ್ನು ಕೂಡ ಕೇಳಿದ್ದೀರಾ. ಅದಕ್ಕೆ ಉತ್ತರ ಇಲ್ಲಿದೆ.

ಅಮೇರಿಕಾ ಸರಕಾರ ಜಗತ್ತಿನ ದೊಡ್ಡಣ್ಣನಾಗಿ ಕಳೆದ 80/90 ವರ್ಷದಿಂದ ಬರುತ್ತಿದೆ. ಈ ಪಟ್ಟ ಸುಮ್ಮನೆ ಸಿಕ್ಕುವುದಿಲ್ಲ. ತನ್ನ ಜನರಿಗೆ, ತನ್ನ ದೇಶದ ಅಭಿವೃದ್ಧಿಗೆ ಖರ್ಚು ಮಾಡಬೇಕು ಅದರಲ್ಲಿ ಕಂಜೂಸು ಮಾಡುವಂತಿಲ್ಲ. ಇದರ ಜೊತೆಗೆ ಜಗತ್ತಿನ ಬಡ ದೇಶಗಳಿಗೆ ಗ್ರಾಂಟ್ ರೂಪದಲ್ಲಿ ಹಣ ಸಹಾಯ ಮಾಡುವುದು, ಕೆಲವೊಂದು ಕಡೆ ತಮ್ಮ ಹಿಡಿತ ಕುಗ್ಗದಂತೆ ನೋಡಿಕೊಳ್ಳಲು ಹಣವನ್ನು ಖರ್ಚು ಮಾಡಬೇಕು. ಹೀಗೆ ಅಮೇರಿಕಾ ಎನ್ನುವ ದೇಶ ಕೇವಲ ತನ್ನ ಮನೆಯನ್ನು ನೋಡಿಕೊಳ್ಳುವುದಲ್ಲದೆ

BANGALORE IAS Academy

ಲಕ್ಷಾಂತರ ಕೋಟಿ ಡಾಲರ್ ಹಣವನ್ನು ಜಾಗತಿಕ ಸುಪ್ರಿಮೆಸಿ ಉಳಿಸಿಕೊಳ್ಳಲು ಖರ್ಚು ಮಾಡಬೇಕು. ಸಹಜವಾಗೇ ಆದಾಯಕ್ಕಿಂತ ಹೆಚ್ಚಿನ ಖರ್ಚು ಉತ್ಪನ್ನವಾಗಿದೆ.

ಹೀಗೆ ಆದಾಯ ಮೀರಿದ ಖರ್ಚಿಗೆ ಫಿಸ್ಕಲ್ ಡೆಫಿಸಿಟ್ ಎನ್ನಲಾಗುತ್ತದೆ. ಹೀಗೆ ಉತ್ಪನ್ನವಾದ ಡೆಫಿಸಿಟ್ ಹಣವನ್ನು ಹೊಂದಿಸಲು ಡೆಟ್ ಬಾಂಡ್ ಟ್ರಶರಿ ಬಿಲ್ ಇತ್ಯಾದಿಗಳನ್ನು ಅದು ಬಿಡುಗಡೆ ಮಾಡುತ್ತಾ ಬಂದಿತು. ಅಮೇರಿಕಾ ದೇಶದ ಪ್ರಭಾವ ನೋಡಿ ಇತರೆ ದೇಶಗಳು, ಜನ, ಒಟ್ಟಾರೆ ಜಗತ್ತಿನ ಯಾವ ಸಂಸ್ಥೆ, ದೇಶ ಅಥವಾ ವ್ಯಕ್ತಿ ಕೂಡ ಇದನ್ನು ಕೊಳ್ಳಬಹುದು ಎಂದಿರುವ ಕಾರಣ ಎಲ್ಲರೂ ಅದನ್ನು ಕೊಳ್ಳಲು ಶುರು ಮಾಡಿದರು. ನಿಗದಿತ ಬಡ್ಡಿ ಮತ್ತು ಮೂಲ ಹಣಕ್ಕೆ ಭದ್ರತೆಯನ್ನು ಅಮೇರಿಕಾ ಸರಕಾರ ನೀಡುವ ಕಾರಣ ಎಲ್ಲರೂ ಮುಗಿಬಿದ್ದು ಇದನ್ನು ಖರೀದಿಸಲು ಶುರು ಮಾಡಿದರು.

ಉದಾಹರಣೆ ನೋಡೋಣ. ಮೊದಲ ವರ್ಷದಲ್ಲಿ ಆದಾಯ 100, ಖರ್ಚು 105 ಎಂದುಕೊಳ್ಳಿ. ಆಗ ಆದಾಯ ಮೀರಿದ ಖರ್ಚು 5 ಡಾಲರ್. ಈ ಹಣವನ್ನು ಡೆಟ್ ಬಾಂಡ್ ವಿತರಣೆ ಮೂಲಕ ಅಮೇರಿಕಾ ತುಂಬಿ ಕೊಂಡಿತು. ಆದರೆ 5 ಡಾಲರ್ ಹಣವನ್ನು ಮೂರು ವರ್ಷದ ನಂತರ ವಾಪಸ್ಸು ಕೊಡುವುದಾಗಿ ಸಾಲ ಮಾಡುವ ಸಮಯದಲ್ಲಿ ಹೇಳಲಾಗಿತ್ತು. ಹೀಗಾಗಿ ಮೂರನೇ ವರ್ಷ ಮತ್ತೆ ಆದಾಯ ಮೀರಿದ ಖರ್ಚು 6 ಡಾಲರ್ ಎಂದುಕೊಳ್ಳಿ ಇದರ ಜೊತೆಗೆ ಮೊದಲ ವರ್ಷದ ಡೆಟ್ 5 ಡಾಲರ್ ವಾಪಸ್ಸು ಕೊಡಬೇಕು. ಹೀಗಾಗಿ ಮೂರನೇ ವರ್ಷದ ಶಾರ್ಟೇಜ್ 11 ಡಾಲರ್! ಹೀಗಾಗಿ ಮೂರನೇ ವರ್ಷ 11 ಡಾಲರ್ ಡೆಟ್ ಬಾಂಡ್ ವಿತರಿಸಬೇಕಾಯ್ತು. ಹೀಗೆ ಇದೆ ಪ್ರಕ್ರಿಯೆ ಕಳೆದ 60 ವರ್ಷಕ್ಕೂ ಹೆಚ್ಚಿನ ಸಮಯ ನಡೆದುಕೊಂಡು ಬಂದು ಅದು ಇಂದಿಗೆ ದೊಡ್ಡ ಬೆಟ್ಟವಾಗಿ ಬೆಳೆದು ನಿಂತಿದೆ. ಸಾಮಾನ್ಯ ಸ್ಥಿತಿಯಲ್ಲಿ ಇದನ್ನು ಅಮೇರಿಕಾ ಹೇಗೂ ಸಂಭಾಳಿಸಿ ಬಿಡುತ್ತಿತ್ತು. ಆದರೆ ಚೀನಾ ಎನ್ನುವ ದೇಶದ ಉಗಮ ಅಮೆರಿಕಕ್ಕೆ ಮುಳ್ಳಾಗಿದೆ. ಅಮೇರಿಕ್ಕ ವರ್ಚಸ್ಸು ಈ ವರ್ಷಗಳಲ್ಲಿ ಬಹಳ ಮಟ್ಟಿಗೆ ಕುಸಿಯಲು ಕಾರಣ ಚೀನಾ ಎನ್ನುವ ಅಸಾಮಾನ್ಯ ದೇಶ. ಈ ಎಲ್ಲಾ ಕಾರಣದಿಂದ ಅಮೇರಿಕಾ ಸಾಲದಲ್ಲಿ ಮುಳುಗಿದೆ. ಸಾಲ ಕೊಟ್ಟವರರಲ್ಲಿ ಜಪಾನ್ ಸಹಿತ ಹತ್ತಾರು ದೇಶಗಳಿವೆ. ಭಾರತ ಕೂಡ ಅಮೇರಿಕಾದ ಡೆಟ್ ಬಾಂಡ್ ಕೊಂಡಿದೆ. ಆದರೆ ಭಾರತ ಈ ಪಟ್ಟಿಯಲ್ಲಿ ಹನ್ನೊಂದನೇ ಸ್ಥಾನದಲ್ಲಿದೆ. ಜಪಾನ್ ಮೊದಲಿಗನ ಸ್ಥಾನದಲ್ಲಿದೆ.

<u>ತೆರಿಗೆ ಹೆಚ್ಚಳ ಹೇಗೆ ಕೆಲಸ ಮಾಡುತ್ತದೆ? ಇದು ಅಮೇರಿಕಾ ದೇಶಕ್ಕೆ ಹೇಗೆ ಮಾರಕವಾಗುತ್ತದೆ?</u>

ಗಮನಿಸಿ ಒಂದು ಪದಾರ್ಥ ಭಾರತದಿಂದ ಅಮೇರಿಕಾ ತಲುಪಲು 100 ರೂಪಾಯಿ ಆಯ್ತು ಎಂದುಕೊಳ್ಳಿ ಅಂದರೆ ಪದಾರ್ಥದ ಬೆಲೆ ಪ್ಲಸ್ ಸಾಗಾಣಿಕೆ ವೆಚ್ಚ ಎಲ್ಲಾ ಸೇರಿ 100 ರೂಪಾಯಿ ಎಂದುಕೊಳ್ಳಿ. ಅಮೇರಿಕಾ ಇದರ ಮೇಲೆ 26 ಪ್ರತಿಶತ ತೆರಿಗೆ ಹಾಕಿದರೆ ಆಗ ಪದಾರ್ಥದ ಬೆಲೆ 126 ರೂಪಾಯಿ ಆಯ್ತು. ಅಂದರೆ ಅಮೆರಿಕನ್ ಗ್ರಾಹಕನ ಜೇಬಿಗೆ 26 ರೂಪಾಯಿ ಹೆಚ್ಚಿಗೆ ಹೊರೆಯಾಯ್ತು. ಇದರಿಂದ ಆ ದೇಶದಲ್ಲಿ ಹಣದುಬ್ಬರ ಹೆಚ್ಚಾಗುತ್ತದೆ. ಹೆಚ್ಚಾದ ಹಣದುಬ್ಬರ ಇನ್ನು ಹತ್ತಾರು ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇದೊಂದು ವಿಷ ವರ್ತುಲ. ಇದರಿಂದ ಮರಳುವುದು ಸುಲಭವಲ್ಲ. ಇದರಿಂದ ಲಾಭವೆಂದರೆ ಭಾರತದ ಪದಾರ್ಥದ ಬದಲು ಅಮೇರಿಕಾದಲ್ಲಿ ಉತ್ಪನ್ನವಾದ ಪದಾರ್ಥ ಬಳಸಲು ಶುರು ಮಾಡಲಿ ಎನ್ನುವುದು. ಆದರೆ ಅದೇ ಪದಾರ್ಥವನ್ನು ಅಮೇರಿಕಾದಲ್ಲಿ ಉತ್ಪಾದಿಸಲು 150೦ ರೂಪಾಯಿ ಬೇಕಾಗುತ್ತದೆ ಎನ್ನುವುದು ಕಟುಸತ್ಯ. ಇದರ ಜೊತೆಗೆ ಕೆಲವು ಪದಾರ್ಥಗಳನ್ನು ಉತ್ಪಾದಿಸಲು ತಗಲುವ ಸಮಯ ಕೂಡ ಲೆಕ್ಕ ಹಾಕಬೇಕಾಗುತ್ತದೆ.

ಈ ಎಲ್ಲಾ ಕಾರಣದಿಂದ ಅಮೇರಿಕಾ ತನಗೆ ಅತ್ಯವಶ್ಯಕ ಎನ್ನಿಸಿದ ಪದಾರ್ಥಗಳ ಮೇಲೆ, ಮಿತ್ರ ದೇಶಗಳ ಪದಾರ್ಥಗಳ ಮೇಲೆ ನಯಾಪೈಸೆ ತೆರಿಗೆಯನ್ನು ಹಾಕುತ್ತಿರಲಿಲ್ಲ. ಇದೀಗ ತೆರಿಗೆ ಹಾಕಿದ ಕಾರಣ ಅಲ್ಲಿ ಹಣದುಬ್ಬರ ಹೆಚ್ಚಾಗುತ್ತದೆ. ಗ್ರಾಹಕನಿಗೆ ಹೆಚ್ಚಿನ ಬಿಸಿ ತಟ್ಟುತ್ತದೆ. ತೆರಿಗೆ ಹಾಕುವುದರ ಹಿಂದಿನ ಉದ್ದೇಶ

BANGALORE IAS Academy

ಎರಡು; ಮೊದಲನೆಯದ್ದು ಇದರಿಂದ ಎಲ್ಲಾ ದೇಶಗಳೂ ಒಂದು ರೀತಿಯ ಶಾಕ್ ಗೆ ಒಳಗಾಗುತ್ತವೆ. ಆಗ ಮಾರುಕಟ್ಟೆಯಲ್ಲಿ ಅಸ್ಥಿರತೆ ಉಂಟಾಗುತ್ತದೆ. ಎರಡನೇ ಉದ್ದೇಶ ಬೇರೆ ದೇಶಗಳು ಅಮೆರಿಕಾದೊಂದಿಗೆ ಸಂಧಾನಕ್ಕೆ ಬರುತ್ತವೆ ಆಗ ಅವರೊಂದಿಗೆ ಕುಳಿತು ಅಮೇರಿಕಾದಲ್ಲಿ ನಿಮ್ಮ ಉದ್ಯಮ ಶುರು ಮಾಡಿ ಎಂದು ಒತ್ತಾಯ ಹೇರುವುದು, ತನ್ಮೂಲಕ ಅಮೇರಿಕಾದಲ್ಲಿ ಉದ್ಯೋಗ ಸೃಷ್ಟಿ ಮಾಡುವುದು ಮತ್ತು ಹಣದುಬ್ಬರವನ್ನು ಕೂಡ ನಿಯಂತ್ರಣಕ್ಕೆ ತರುವುದು. ಆದರೆ ಅಮೇರಿಕಾ ಯೋಚಿಸಿದಂತೆ ಎಲ್ಲಾ ಆಗಬೇಕು ಎಂದಿಲ್ಲ. ಹಿಂದೆ ಅಮೇರಿಕಾ ಯೋಚಿಸಿದಂತೆ ಎಲ್ಲಾ ನಡೆಯುತ್ತಿತ್ತು. ಈಗ ಕಾಲ ಬದಲಾಗಿದೆ. ಚೀನಾ ಅಮೇರಿಕಾ ದೇಶಕ್ಕೆ ಸಡ್ಡು ಹೊಡೆದು ನಿಂತಿದೆ. ಯೂರೋಪಿಯನ್ ಯೂನಿಯನ್ ಕೂಡ ಅಮೇರಿಕಾ ವಿರುದ್ಧ ತೆರಿಗೆ ಸಮರಕ್ಕೆ ಸಿದ್ಧವಾಗಿದೆ. ಹೀಗಾಗಿ ಇನ್ನಷ್ಟು ಹೆಚ್ಚಿನ ಅಸ್ಥಿರತೆ ಉಂಟಾಗಿದೆ.

<u>ಪ್ರಶ್ನೆಗಳು</u>

1. ಭಾರತೀಯ ಷೇರು ಮಾರುಕಟ್ಟೆ ಸೇರಿದಂತೆ ಜಾಗತಿಕ ಷೇರು ಮಾರುಕಟ್ಟೆಗಳು ಕುಸಿತ ಕಂಡಿದ್ದು ಏಕೆ?
2. ಅಮೆರಿಕ ತೆರಿಗೆಗಳನ್ನು ಏಕೆ ಹೆಚ್ಚಿಸುತ್ತಿದೆ, ಮತ್ತು ಅದು ತನ್ನದೇ ಆದ ಆರ್ಥಿಕತೆಯ ಮೇಲೆ ಹೇಗೆ ನಕಾರಾತ್ಮಕ ಪರಿಣಾಮ ಬೀರುತ್ತದೆ?
3. ದಶಕಗಳಿಂದ ಅಮೆರಿಕ ತನ್ನ ಹಣಕಾಸಿನ ಕೊರತೆಯನ್ನು ಹೇಗೆ ನಿರ್ವಹಿಸುತ್ತ ಬಂದಿದೆ ಎಂಬುದನ್ನು ವಿವರಿಸಿ.
4. ಅಮೆರಿಕದಲ್ಲಿ ಆಮದು ಮಾಡಿಕೊಳ್ಳುವ ಸರಕುಗಳ ಮೇಲಿನ ತೆರಿಗೆ ಹಣದುಬ್ಬರಕ್ಕೆ ಹೇಗೆ ಕಾರಣವಾಗುತ್ತದೆ? ಒಂದು ಉದಾಹರಣೆ ನೀಡಿ.
5. ಅಮೆರಿಕ ಹೆಚ್ಚಿನ ಸುಂಕಗಳನ್ನು ವಿಧಿಸುವುದರ ಹಿಂದಿನ ದ್ವಂದ್ವ ಉದ್ದೇಶಗಳೇನು, ಮತ್ತು ಅವು ಇಂದು ಏಕೆ ವಿಫಲವಾಗಬಹುದು?

**3. ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ 100 ಶಬ್ದಗಳಿಗೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಲೇಖನದ ಕೊನೆಯಲ್ಲಿ ನೀವು ಬಳಸಿರುವ ಶಬ್ದಗಳ ಸಂಖ್ಯೆಯನ್ನು ಸೂಚಿಸಿ. (25 ಅಂಕಗಳು)**

ಒಂದು ಹಳ್ಳಿ. ಅಲ್ಲಿ ಹೆಚ್ಚು - ಕಡಿಮೆ ಎಲ್ಲ ಬಡ ಕುಟುಂಬಗಳೇ ಇದ್ದವು.

ಒಂದು ಮಾತ್ರ ಶ್ರೀಮಂತ ಕುಟುಂಬವಿತ್ತು . ಈ ಕುಟುಂಬದ ಯಜಮಾನ ಬಡ ಕುಟುಂಬಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಗರ್ವದಿಂದ ಮೆರೆಯುತ್ತಿದ್ದನು . ಇವನಿಗೆ ಹೇಗಾದರೂ ಮಾಡಿ ಬುದ್ಧಿ ಕಲಿಸಬೇಕೆಂದು ಎಲ್ಲರೂ ಕಾಯುತ್ತಿದ್ದರು . ಆ ಹಳ್ಳಿಯಲ್ಲಿ ಪ್ರತಿ ವರ್ಷದಂತೆ ಗ್ರಾಮ ದೇವತೆಯ ಹಬ್ಬ ಬಂತು .ಸುತ್ತಮುತ್ತಲಿನ ಗ್ರಾಮದವರು ಸೇರಿದ್ದರು. ಗ್ರಾಮ ದೇವತೆಯ ಹಬ್ಬದ ವಿಶೇಷ ದೇವತೆಯ ಮೈ ಮೇಲೆ ಹಾಕಿರುವ ಸೀರೆಯನ್ನು ಹರಾಜು ಹಾಕುವುದಾಗಿತ್ತು . ಅದನ್ನು ತೆಗೆದುಕೊಂಡವರಿಗೆ ಪುಣ್ಯ ಲಭಿಸುವುದು ಎಂಬ ನಂಬಿಕೆಯಿತ್ತು . ಯಾವಾಗಲೂ ಸೀರೆ ಶ್ರೀಮಂತ ಕುಟುಂಬದ ಪಾಲಾಗುತ್ತಿತ್ತು .

ಈ ಸಾರಿ ಹಬ್ಬದಲ್ಲಿ ಹರಾಜು ಪ್ರಾರಂಭವಾಯಿತು , ಹರಾಜು ಕೂಗುವ ವ್ಯಕ್ತಿ ಸೀರೆ ತೋರಿಸುತ್ತಾ ಒಂದು ಸಾವಿರ ಎಂದನು . ಶ್ರೀಮಂತ ' ಎರಡು ಸಾವಿರ ' ಎಂದನು , ತಕ್ಷಣವೇ ಗುಂಪಿನಿಂದ ಐದು ಸಾವಿರ ' ಎಂಬ ಕೂಗು ಕೇಳಿಸಿತು . ಶ್ರೀಮಂತನಿಗೆ ಆಶ್ಚರ್ಯವಾಯಿತು . ನೋಡುತ್ತಾನೆ .

ತನ್ನ ಹಳ್ಳಿಯ ಬಡ ಕುಟುಂಬದ ವ್ಯಕ್ತಿಯೊಬ್ಬ ಕೂಗಿದ್ದು ! ಶ್ರೀಮಂತ ಏನನ್ನೂ ತೋರಿಸಿಕೊಳ್ಳದೆ ಮತ್ತೆ ಹತ್ತು ಸಾವಿರ ಎಂದನು . ಶ್ರೀಮಂತನ ಕೂಗಿಗೆ ಪ್ರತಿಯಾಗಿ " ನನ್ನ ಇಡೀ ಆಸ್ತಿ ' ಎಂದು ಬಿಟ್ಟ ಬಡವ . ಇದನ್ನು ಕೇಳಿದ ಶ್ರೀಮಂತ ಆತನ ಸರಿಸಮಾನವಾಗಿ ಕೂಗಲು ಧೈರ್ಯ ಬರಲಿಲ್ಲ .

BANGALORE IAS Academy

ಏನೂ ಮಾತು ಹೊರಡಲಿಲ್ಲ. ಮುಖಭಂಗವಾದಂತಾಗಿ ಮೆಲ್ಲನೆ ಕಾಲುಕಿತ್ತನು .

TITLE:___________________________

**4. ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ [25]**

One of the greatest theoretical physicists of all time, Einstein is best known for the Theory of Relativity although the Nobel Prize was awarded for his work on the interpretation of Photoelectric effect. He revealed that it took him just five weeks to write his paper on Relativity in between his work as a clerk. On being asked to explain the Theory of Relativity, Einstein explained in his inimitable style, ‘‘When a man sits with a pretty girl for an hour it seems like a minute. But let him sit on a hot stove for a minute, it will seems like more than an hour. That is Relativity.’’ He also remarked, ‘‘Since mathematicians have invaded the Theory of Relativity I do not understand it myself anymore!’’ He was a simple and unassuming man to whom success. Luxury possessions and appearances were unimportant. He was often seen walking on the streets of Berne in green slippers without socks when appointed as the Dean of a university, it is said that he was asked to furnish a list of his requirements. His immediate demand was a wastepaper basket. On being asked the reason for this, his typical response later was ‘‘I commit mistakes you know.

*ವಿಭಾಗ– ಬಿ*

**5. ಕೆಳಗಿನವಗಳಲ್ಲಿ ಯಾವುದಾದರೂ ಒಂದರ ಕುರಿತು ಪತ್ರ ಬರೆಯಿರಿ. (10 ಅಂಕಗಳು)**

1. ಸಾರ್ವಜನಿಕ ಸ್ಥಳಗಳಲ್ಲಿ ಕನ್ನಡ ಬಳಕೆ ಕಡಿಮೆಯಾಗುತ್ತಿರುವ ಬಗ್ಗೆ ಸುದ್ದಿಪತ್ರಿಕೆ ಸಂಪಾದಕರಿಗೆ ಪತ್ರ.
2. ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸ್ನೇಹಿತನಿಗೆ ಆಹ್ವಾನ ಪತ್ರ ಬರೆಯಿರಿ.

**6. ಈ ಕೆಳಗಿನವುಗಳಲ್ಲಿ 5ಕ್ಕೆ ತತ್ಸಮ ರೂಪಗಳನ್ನುಕೊಡಿ : (5 ಅಂಕಗಳು)**

(a) ಬಸದಿ
(b) ಬವಡ
(c) ತಗುಗೆ
(c) ದಾರಿಂಚೆ
(e) ಚೆಣ
(f) ಸಾಸಿರ
(g) ಬುಚೆ
(h) ಬಳ್ಳಾ
(i) ಹುಕ್ಕಿ
(j) ಪರೆಯ

NAMMAKPSC ACADEMY HEBBAL | VIJAYANAGAR BREAKING BARRIERS TO GREATNESS
BANGALORE IAS Academy

**7. ಕೆಳಗಿನವುಗಳಲ್ಲಿ 5ಕೆ  ತದ್ಭವ ರೂಪಗಳನ್ನು ನೀಡಿ: (5 ಅಂಕಗಳು)**

(a) ಹಠ
(b) ಹಿಂಸೆ
(c) ಗೊಬ್ಬಾರ
(d) ಪ್ರಜ್ಞಾಪರ
(e) ಯುದ್ದ
(f) ದುರ್ವ್ಯವಹಾರ
(g) ಫಲಾಶೆ
(h) ಪ್ರಾಣಿ
(i) ಕಳವ
(j) ಚಿತ

**8.  ಈ ಕೆಳಗಿನವುಗಳಲ್ಲಿ ಎರಡರ ಅರ್ಥವನ್ನು ವಿವರಿಸಿ: (2X5=10 Marks)**

(A) ದೇಶಾದ್ಯಂತ ಪ್ರವಾಸ ಮಾಡುವುದು, ಪುಸ್ತಕ ಓದುವುದು
(B) ಹತ್ತು ಕಟ್ಟಿದ ಮುತ್ತು ಕಟ್ಟುವುದು
(C) ಅಜ್ಜಿ ಇಲ್ಲದ ಮನೆ, ಮಜ್ಜಿಗೆ ಇಲ್ಲದ ಊಟ
(D) ಅಲ್ಪರ ಸಂಗ, ಅಭಿಮಾನ ಭಂಗ

**9. ಕೆಳಗಿನ ವಾಕ್ಯಗಳಲ್ಲಿ ಪದಗಳ ಕಾಗುಣಿತವನ್ನು ಸರಿಪಡಿಸಿ ಬರೆಯರಿ (2X5=10)**

(ಎ) ಇಬ್ಬರ ಮದ್ಯೆ ಯವ ಜಗಳವು ಇಲ್ಲ
(ಬಿ) ಹುಡುಗಿ ಕುಳ್ಳು ಹಾದರು ಶುಂದರವಾಗಿದ್ದಾಳೆ
(ಸಿ) ಶಿಕ್ಷಣದ ಅರ್ಥವು ವೈಜ್ಞಾನಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದೆ

**10. ಈ ಕೆಳಗಿನ ನುಡಿಗಟ್ಟುಗಳ  ಅರ್ಥವನ್ನು ವಿವರಿಸಿ, ಅವುಗಳನ್ನು ನಿಮ್ಮ ಶೈಲಿಯ ವಾಕ್ಯಗಳಲ್ಲಿ ಪ್ರಯೋಗಿಸಿ: (2x5=10 MARKS)**

(a) ಕರುಳು ಕಿವುಚು
(b) ಕಣ್ಮಣಿಯಾಗು
(c) ಕಿವಿಕಚ್ಚು
(d) ಮಗ್ಗುಲ  ಮುಳ್ಳು
(e) ಬೆಟ್ಟಕ್ಕೆ  ಕಲ್ಲು ಹೊರು

BANGALORE IAS Academy